ಶ್ರೀ ಹೆಚ್. ಡಿ. ದೇವೇಗೌಡ (ಮಾನ್ಯ ಲೋಕೋಪಯೋಗಿ ಸಚಿವರು).—ಈ ರಸ್ತೆ ಬೈಪಾಸ್ ಮಾಡಬೇಕಾದುದು ಅತ್ಯಂತ ಅವಶ್ಯಕವಾದುದು, ಅದು ಬಹಳ ವ್ಯಾಲ್ಯುಬಲ್ ಲ್ಯಾಂಡ್. ಅಷ್ಟು ಸುಲಭವಾಗಿ ಜನ ಬಿಟ್ಟುಕೊಡುವುದಕ್ಕೆ ಸಿದ್ಧರಿಲ್ಲ. ೧೯೮೧-೮೨ರಲ್ಲಿ ಅದಕ್ಕಾಗಿ ೫೦,೦೦೦ ರೂಪಾಯಿಯನ್ನು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿದ್ದರು. ಅದಾದ ಮೇಲೆ ನಾವು ಈ ವರ್ಷ ನಾಲ್ಕು ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಲ್ಯಾಂಡ್ ಅಕ್ವಿಸಿಷನ್ ರೆಕಾರ್ಡ್ಸ್ ಎಲ್ಲಾ ಪರಿಶೀಲನೆಯಾಗುತ್ತಿದೆ.

ಬೆಳಗಾವಿ ಜಿಲ್ಲೆಯಲ್ಲಿ ಕಾಗದ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ಬಗ್ಗೆ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಸಂಕೇಶ್ವರ ಸಕ್ಕರೆ ಕಾರ್ಖಾನೆಯ ಮಾಜಿ ಚೇರ್ಮನ್ನರು ಬೆಳಗಾವಿ ಜಿಲ್ಲೆಯಲ್ಲಿ ಸ್ಥಾಪನೆ ಮಾಡಬೇಕೆಂದಿರುವ ಕಾಗದ ಕಾರ್ಖಾನೆಗೆ ಸರಕಾರದಿಂದ ಯೋಗ್ಯ ಸಹಾಯ ಸಿಗುತ್ತಿಲ್ಲ ಹಾಗೂ ಸರಕಾರಕ್ಕೆ ಈ ಸ್ಥಾಪನೆಯಲ್ಲಿ ಸಹಾಯ ಮಾಡುವಂತಹ ಮನಸ್ಸಿಲ್ಲ. ಇದೇ ರೀತಿ ಮಾನ್ಯ ಮಂತ್ರಿಗಳು ಈ ಕಾರ್ಖಾನೆಯ ಸ್ಥಾಪನೆಯಲ್ಲಿ ಸಂಪೂರ್ಣವಾಗಿ ಅಸಹಕಾರ ಮಾಡುತ್ತಿರುವುದು ಮತ್ತು ಈ ಕಾರ್ಖಾನೆಯ ಮಾಜಿ ಚೇರ್ಮನ್ನರು ಶ್ರೀ ಬಸಗೌಡ ಅಪ್ಪಯ್ಯಗೌಡ ಪಾಟೀಲ್ ಇವರು ಪತ್ರಿಕೆಯಲ್ಲಿ ಈ ವಿಷಯದಲ್ಲಿ ಹೇಳಿಕೆಯನ್ನು ನೀಡಿ ಸರಕಾರದ ಮೇಲೆ ಆರೋಪವನ್ನು ಹೊರಿಸಿರುತ್ತಾರೆ. ಮಾನ್ಯ ಮಂಖ್ಯಿಮಂತ್ರಿಗಳು ಬೆಳಗಾವಿ ಜಿಲ್ಲೆಯಲ್ಲಿ ಕಾಗದ ಕಾರ್ಖಾನೆ ಸ್ಥಾಪನೆ ಮಾಡುವುದಕ್ಕಲ್ಲಿ ಅಡ್ಡಿ ಬರುವುದಕ್ಕೆ ಕಾರಣವೇನು ? ಹಾಗೂ ಈಗಾಗಲೇ ಸರಕಾರದ ಮೇಲೆ ಆಪಾದನೆಯನ್ನು ಮಾಡಿರುವುದರಿಂದ ಸರಕಾರದಿಂದ ಯಾವ ರೀತಿಯ ಸಹಾಯ ಸಿಗುವುದು ಎನ್ನುವ ವಿಷಯ ಜನರಲ್ಲಿ ಚರ್ಚೆಗೆ ಎಡೆ ಮಾಡಿ ಕೊಟ್ಟಿರುತ್ತದೆ. ಕಾರ್ಖಾನೆಯ ಸ್ಥಾಪನೆಯಲ್ಲಿ ಸರಕಾರದ ನಿಲುವಿನ ಬಗ್ಗೆ ಹೇಳಿಕೆಯನ್ನು ನೀಡುವಂತೆ ಮಾನ್ಯ ಮಂಖ್ಯಿ ಮಂತ್ರಿಗಳಿಗೆ ನಾನು ಒತ್ತಾಯಿಸುತ್ತೇನೆ. ಈ ವಿಷಯದಲ್ಲಿ ಮಾಡಿರುವಂತಹ ಆರೋಪವನ್ನು ಬುದ್ಧಾ ಪುರಸ್ಕಾರವೆಂದು ಭಾವಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು).—ಇದನ್ನು ಸರಕಾರ ಮಾಡಬೇಕೆಂದು ಅವರ ಅಪೇಕ್ಷೆಯೇ ಅಥವಾ ಕೋ ಆಪರೇಟಿವ್ ಸೆಕ್ಟಾರ್‌ನಲ್ಲಿ ಮಾಡಬೇಕೆಂದು ಅಪೇಕ್ಷೆಯಿದೆಯೇ ? ದಯವಿಟ್ಟು ಹೇಳಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಕೋ ಆಪರೇಟಿವ್ ಸೆಕ್ಟಾರ್‌ನಲ್ಲಿ ಮಾಡಬೇಕೆಂದು ನಾವು ಹೇಳುತ್ತಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಹುಂ.

ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಪಟ್ಟಣಕ್ಕೆ ನೀರಿನ ಸರಬರಾಜು ಕೊಡುವ ಬಗ್ಗೆ

ಶ್ರೀ ಜಿ. ಎಸ್. ಆಚಾರ್ (ಬೈಂದೂರ್).—ಮಾನ್ಯ ಅಧ್ಯಕ್ಷತೆ ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನ ಪುರಸಭಾ ವ್ಯಾಪ್ತಿಯಲ್ಲಿ ಬೈಂದೂರು ಪಟ್ಟಣಕ್ಕೆ ಸುರಕ್ಷಿತ ನೀರು ಸರಬರಾಜು ಯೋಜನೆ ಮಂಜೂರು ಮಾಡಬೇಕೆಂಬ ಬೇಡಿಕೆ ಸರಕಾರದ ಮುಂದೆ ಬಹು ವರ್ಷಗಳಿಂದ ಇದ್ದರೂ ಈ ಸಲವಾಗಿ ಪುರಸಭೆ ಹಣ ಸಂದಾಯ ಮಾಡಿದ್ದರೂ ಈ ತನಕ ಅಂದಾಜು ಪಟ್ಟಿ ತಯಾರಿ, ಪುನರಂದಾಜು ಪಟ್ಟಿ ತಯಾರಿ ಇತ್ಯಾದಿಯಲ್ಲಿ ಕಾಲ ವಿಳಂಬವಾಗುತ್ತಿದೆ ಕಳೆದ ಮಳೆಗಾಲದಲ್ಲಿ ಮಳೆ ಕಡಿಮೆ ಇದ್ದು ಬಾವಿಗಳು ಬತ್ತುವ ಲಕ್ಷಣ ಕಾಣುತ್ತಿದೆ ಹಾಗೂ ಯಡರೆ ಪ್ರದೇಶದ ಬಾವಿಗಳಲ್ಲಿ ಉಪ್ಪು ನೀರು ಬರುತ್ತಿವೆ. ಆದುದರಿಂದ ಬೈಂದೂರು ಪಟ್ಟಣಕ್ಕೆ ಸುರಕ್ಷಿತ ನೀರು ಸರಬರಾಜು ಯೋಜನೆಯನ್ನು ಕೂಡಲೇ ಮಂಜೂರು ಮಾಡಿ ಕಾರ್ಯಾರಂಭ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಈ ನೀರು ಪೂರೈಕೆ ಕಾರ್ಯಕ್ರಮವು ಈ ವರ್ಷದ ಆಧ್ಯತೆಯ ಪಟ್ಟಿಯಲ್ಲಿ ಸೇರಿಸಿಲ್ಲ. ಇದನ್ನು

೧೯೮೬-೮೭ನೇ ಇಸವಿಯ ಆಧ್ಯತೆಯ ಪಟ್ಟಿಯಲ್ಲಿ ಸೇರಿಸಿ ಪೂರ್ಣಗೊಳಿಸಂವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕೊಳ್ಳೇಗಾಲ ತಾಲ್ಲೂಕಿನಲ್ಲಿ 262 ಅಂಗನವಾಡಿ

ಶ್ರೀ ರಾಜಂಗೌಡ. ಜಿ. (ಹನೂರ್).— ಅಧ್ಯಕ್ಷರೆ, ಕೊಳ್ಳೇಗಾಲ ತಾಲೂಕಿನಲ್ಲಿ ೨೬೨ ಅಂಗನವಾಡಿ ಕೇಂದ್ರಗಳಿದ್ದು, ಅವುಗಳನ್ನು ನೋಡಿ ಕೊಳ್ಳತಕ್ಕಂತಹ ಸೂಪರ್‌ವೈಜರ್ ಹುದ್ದೆಗಳು ಪೂರ್ತಿಯಾಗಿ ಭರ್ತಿ ಮಾಡದೇ ಇರುವುದರಿಂದ ಅಂಗನವಾಡಿ ಶಿಕ್ಷಕಿಯರ ಮೇಲೆ ಹತೋಟಿ ತಪ್ಪಿ ಕೆಲವು ದಿನಗಳ ಹಿಂದೆ ಆರು ಜನ ಅಂಗನವಾಡಿ ಶಿಕ್ಷಕಿಯರು ಮಕ್ಕಳಿಗೆ ಉಪಹಾರಕ್ಕೆ ಒದಗಿಸಿಕೊಟ್ಟಿದ್ದ ಆಹಾರ ಪದಾರ್ಥಗಳನ್ನು ಅಂಗಡಿಯಲ್ಲಿ ವಗಾರಾಟ ಮಾಡುತ್ತಿದ್ದಾಗ ಕೊಳ್ಳೇಗಾಲದ ಪೋಲೀಸ್‌ನವರು ಹಿಡಿದು ಕೇಸು ರಿಜಿಸ್ಟರ್ ಮಾಡಿ ಎಫ್.ಐ.ಆರ್. ಹಾಕಿರುವ ಎಲ್ಲಾ ವಿಷಯಗಳೂ ತಾಲ್ಲೂಕು ಮಟ್ಟದ, ಜಿಲ್ಲಾ ಮಟ್ಟದ ಅಧಿಕಾರಿಗಳ ಗಮನಕ್ಕೆ ಬಂದಿದ್ದರೂ ಸಹ ಅವರಂಗಳ ಸೇವೆಯನ್ನು ಮುಂದುವರಿಸುತ್ತಿರುವುದು ಉಚಿತವೇ ? ಇದರ ಹಿನ್ನೆಲೆ ಏನು ? ಕೂಡಲೇ ಸೂಕ್ತ ಕ್ರಮ ಕೈಗೊಳ್ಳದಿರುವ ಅಧಿಕಾರಿಗಳ ಬಗ್ಗೆ ತಮ್ಮ ನಿಲುವು ಏನು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—ಕೊಳ್ಳೇಗಾಲಕ್ಕೆ ಸಂಬಂಧಪಟ್ಟಹಾಗೆ ಬಾಲವಿಕಾಸ ಯೋಜನೆಗೆ ೨೬೨ ಅಂಗನವಾಡಿ ಕೇಂದ್ರಗಳು ಮಂಜೂರು ಆಗಿದ್ದು, ಅವುಗಳ ಮೇಲ್ವಿಚಾರಣೆಗಾಗಿ ೧೩ಜನ ಸೂಪರ್‌ವೈಸರ್ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ಈ ೧೩ ಜನ ಸೂಪರ್‌ವೈಸರ್ ಹುದ್ದೆಗಳ ಪೈಕಿ. ೯ ಹುದ್ದೆಗಳನ್ನು ಈಗಾಗಲೇ ಭರ್ತಿ ಮಾಡಲಾಗಿದೆ. ಇಲಾಖಾ ಆಯ್ಕೆ ಸಮಿತಿಯು ಈಗಾಗಲೇ ಆಯ್ಕೆಯನ್ನು ಪೂರ್ತಿಗೊಳಿಸಿದ್ದು, ಕೊಳ್ಳೇಗಾಲದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಮೈಸೂರು ಜಿಲ್ಲೆಯ ಸಮಾಜಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು, ಇವರು, ೨೮-೧೦-೮೯೮೫ ರಂದು ಒಂದು ವರದಿಯನ್ನು ಕಳಂಹಿಸಿದ್ದು, ಕೊಳ್ಳೇಗಾಲದ ಮಕ್ಕಳಿಗೆ ಉಪಹಾರಕ್ಕೆ ಕಳುಹಿಸಲಾಗಿದ್ದ ಆಹಾರಸಾವಾಗ್ರಿಗಳನ್ನು ಆಪಾದಿತರು ಬೇರೆಯವರಿಗೆ ಮಾರಾಟ ಮಾಡುತ್ತಿದ್ದಾಗ ಪೋಲೀಸರ ಕೈಗೆ ಸಿಕ್ಕಿ ಬಿದ್ದಿದ್ದಾರೆ ಎಂದೂ, ಆ ಆಪಾದಿತರುಗಳನ್ನು ತಾತ್ಕಾಲಿಕವಾಗಿ ಕೆಲಸದಿಂದ ತೆಗೆದುಹಾಕಲಾಗಿದೆ ಎಂದು ತಿಳಿಸಿರುತ್ತಾರೆ. ಸಹಾಯಕ ನಿರ್ದೇಶಕರ ವರದಿಯ ಪ್ರಕಾರ ಈಗಾಗಲೇ ಪೋಲೀಸರು, ಶಾಂತಮ್ಮ , ಪುಟ್ಟಸಿದ್ದಮ್ಮ, ವಂಲ್ಲಿಜಮ್ಮ ಮತ್ತು ವಿದ್ಯಾ, ಪದ್ಮ ಇವರ ಮೇಲೆ ಚಾರ್ಜ್‌ಶೀಟ್ ಹಾಕಿರುತ್ತಾರೆ, ನ್ಯಾಯಾಲಯದ ತೀರ್ಪಿನ ನಂತರ ಸೂಕ್ತಕ್ರಮವನ್ನು ಸಂಬಂಧಪಟ್ಟವರ ಮೇಲೆ ತೆಗೆದುಕೊಳ್ಳುತ್ತೇವೆ,

ಮಂಗಳೂರು ತಾಲ್ಲೂಕಿನ ಉಳ್ಳಾಲ ಕ್ಷೇತ್ರದಲ್ಲಿ 10-15 ವರ್ಷಗಳಿಂದ ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡಿರುವವರಿಗೆ ಹಕ್ಕು ಪತ್ರವನ್ನು ನೀಡುವ ಬಗ್ಗೆ

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೇ ಮಂಗಳೂರು ತಾಲ್ಲೂಕಿನಲ್ಲಿ ಉಳ್ಳಾಲ ಕ್ಷೇತ್ರ ಸೇರಿ ಆಕ್ರಮವಾಗಿ ಕಳಿದ ಹತ್ತು ಹದಿನೈದು ವರ್ಷಗಳಿಂದ ಮನಕಟ್ಟಿಕೊಂಡು ಕೃಷಿ ಮಾಡಿಕೊಂಡಂ. ಸರಕಾರಿ ಜಮೀನಿನಲ್ಲಿ ಕುಳಿತುಕೊಂಡವರು ಸಾವಿರಾರು ಜನರಿದ್ದಾರೆ. ಅವರೆಲ್ಲ ಹಕ್ಕು ಪತ್ರಕ್ಕಾಗಿ ಆಗಾಗ ಸಂಬಂಧಿಸಿದವರಿಗೆ ನಿವೇದಿಸಿಕೊಳ್ಳುತ್ತಿದ್ದಾರೆ. ಆತೀ ಬಡವರಾದ ಈ ಸಾವಿರಾರು ಜನರಿಗೆ ಹಕ್ಕು ಪತ್ರ ದೊರೆಯದೆ ಇರುವುದರಿಂದ ಮನೆಗೆ ನಂಬ್ರ ಬೀಳಲಿಲ, ರೇಷನ್ ಕಾರ್ಡು ಕೂಡ ಸಿಕ್ಕುತ್ತಿಲ್ಲ. ಹೀಗೆ ತುಂಬಾ ಕಷ್ಟದಲ್ಲಿರುವ ಆಕ್ರಮವಾಗಿ ಕುಳಿತವರಿಗೆ ಹಕ್ಕುಪತ್ರವನ್ನು ಸಕ್ರಮ ಮಾಡಿ ಹಕ್ಕು ಪತ್ರ ಕೊಡುವಂತಾದ್ದು ಅತೀ ಆಗತ್ಯವಾಗಿರುತ್ತದೆ. ಈ ಕುರಿತು ಕಂದಾಯ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯಾವಹಾರಗಳ ಸಚಿವರು) — ಯಾರು ವಾಸವಾಡಿಕೊಂಡಿದ್ದಾರೆ, ಅಂಥವರಿಗೆ ಹಕ್ಕು ಪತ್ರ ಕೊಟ್ಟು ರೆಗ್ಯುಲೈಸ್ ಮಾಡಿ. ಸಕ್ರಮಗೊಳಿಸಿ ಎಂದು ಕೇಳಿಕೊಳ್ಳುತ್ತಿದ್ದಾರೆ, ಆ ಪ್ರದೇಶವನ್ನು ವಿಸ್ತರಣೆ ಮಾಡಿದ ಹೊರತು